

ಜನರ ಕಣ್ಗಾವಲಿನಲ್ಲಿ ರೂಪುಗೊಂಡಿರುವ ಕರಿ ಜಾಲಿ ಮರಗಳು

ಉರುಳಿದಂತೆ ಮಳೆ ಅಭಾವ ಕಾಡಿತು. ಜನರಿಗೆ ಕಾಡಿನ ಮಹತ್ವದ ಅರಿವಾಗಲೂ ಬರಗಾಲವೇ ಬರಬೇಕಾಯಿತು.

## ಮತ್ತೆ ಚಿಗುರಿತು ಕನಸು

ಜನರ ಒತ್ತಾಸೆಯ ಮೇರೆಗೆ ಅರಣ್ಯ ಇಲಾಖೆ 2002ರಲ್ಲಿ ಮತ್ತೆ ಕೆರೆಯಂಗಳದ 10 ಹೆಕ್ಟರ್ ಪ್ರದೇಶದಲ್ಲಿ 1600 ಕರಿ ಜಾಲಿ ಸಸಿಗಳನ್ನು ನೆಡುವ ಮೂಲಕ ಮರು ಅರಣ್ಯೀಕರಣಕ್ಕೆ ಮುಂದಾಗಿತು. ಜಂಟಿ ಅರಣ್ಯ ಯೋಜನೆ ನಿರ್ವಹಣೆ ಅಡಿಯಲ್ಲಿ, ಗ್ರಾಮೀಣಾಭಿವೃದ್ಧಿ ಮಾರ್ಗದರ್ಶನ ಸಂಸ್ಥೆಯ ಸಹಭಾಗಿತ್ವದಲ್ಲಿ 'ಶ್ರೀ ವನಸಿರಿ ಗ್ರಾಮ ಅರಣ್ಯ ಸಮಿತಿ' ಅಸ್ತಿತ್ವಕ್ಕೆ ಬಂತು. ದುರುಗಮ್ಮ ದೇಗುಲದ ಆವರಣದಲ್ಲಿ ಜರುಗಿದ ಮೊದಲ ಸಭೆಯಲ್ಲಿ, ಅರಣ್ಯ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳು ಹಾಜರಿದ್ದರು. ಪ್ರತಿ ಕುಟುಂಬವೂ ಸ್ವಯಂ ಪ್ರೇರಣೆಯಿಂದ ಸದಸ್ಯತ್ವ ಶುಲ್ಕ ಪಾವತಿಸಿ ಸಮಿತಿಯ ಸದಸ್ಯತ್ವ ಪಡೆಯಿತು.

ಊರವರು ಹುರುಪಿನಿಂದ ಗುಂಡಿ ತೋಡಿ ಸಸಿ ನೆಟ್ಟರು. ಅವರಿಗೆಲ್ಲ ಅಧಿಕೃತ ಕನಿಷ್ಠ ಸಂಬಳ ಸರ್ಕಾರದಿಂದ ದೊರೆಯಿತು. 'ಪ್ರವರ್ತಕರ ಸಮಿತಿ' ರಚನೆಯಾಗಿ, ಅರಣ್ಯ ಒತ್ತುವರಿ, ಅಕ್ರಮವಾಗಿ ಮರ ಕಡಿಯುವುದು, ಮರಗಳ ಕಳ್ಳ ಸಾಗಾಣಿಕೆಯಲ್ಲಿ ಭಾಗಿಯಾಗದಿರಲು, ಅಂಥ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡದಿರಲು ನಿರ್ಧರಿಸಿದರು.

## ಮಳೆ-ಬೆಳೆಯೇ ಲಾಭ!

ಅರಣ್ಯ ಬೆಳೆಸಿದ ನಂತರ ಲಭ್ಯವಾಗುವ ಕಾಡಿನ ಉತ್ಪನ್ನಗಳ ಮೇಲೆ ಅರಣ್ಯ ಇಲಾಖೆಯ ಜೊತೆಗೆ ಜನರಿಗೂ ಅಧಿಕಾರವಿದೆ. ಲಭ್ಯ ಉತ್ಪನ್ನಗಳಲ್ಲಿ ಶೇ 50ರಷ್ಟು ಸರ್ಕಾರಕ್ಕೆ, ಶೇ 25 ಭಾಗ ಸಮಿತಿಯ ಸದಸ್ಯರಿಗೆ ಮತ್ತು ಉಳಿದ ಶೇ 25 ಸಮಿತಿಯ ಅಭಿವೃದ್ಧಿ ನಿಧಿಗೆ ಸಲ್ಲುತ್ತದೆ. ಅದರಂತೆ ಬಹುತೇಕ ಕಡೆ ಐದಾರು ವರ್ಷಗಳ ನಂತರ ಜನರೇ ಮರಗಿಡಗಳ ಕಟಾವಣೆಗೆ ಕೋರಿಕೆ ಇಟ್ಟಲ್ಲಿ, ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿ ಸಭೆ ನಡೆಸಿ ಸರ್ವಾನುಮತದಿಂದ ಅಂಗೀಕರಿಸುತ್ತವೆ.

ಪಾಲಯ್ಯನ ಕೋಟೆಯಲ್ಲಿ, ಅರಣ್ಯ ಇಲಾಖೆ ನೆಡುತೋಪಿನ ಸಂರಕ್ಷಣೆ ಮತ್ತು ನಿರ್ವಹಣೆಯ ಭಾಗಶಃ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ಒಪ್ಪಿಸಿ ದಶಕಗಳೇ ಕಳೆದರೂ ಕಡಿತಲೆಯ ಬಗ್ಗೆ ಊರವರು ಈವರೆಗೂ ತಲೆಕೆಡಿಸಿಕೊಂಡಿಲ್ಲ. ಅದರ ಫಲವಾಗಿ ಮರಗಿಡಗಳು ಸೊಂಪಾಗಿ ಬೆಳೆದಿವೆ, ಮೋಡಗಳನ್ನು ಸೆಳೆದು ಮಳೆ ತರಿಸುತ್ತಿವೆ. ಬಿತ್ತಿದ ಫಲ ಕೈ ಸೇರುತ್ತಿದೆ. ಕೆರೆಕಟ್ಟೆಗಳಲ್ಲಿ ನೀರು ನಿಂತು ಅಂತರ್ಜಲ ಹೆಚ್ಚಿದೆ. 'ಕಡಿದು, ಮರದ ಮುಟ್ಟು ಮಾರಿ ದುಡ್ಡಿನ ಲಾಭ ನೋಡುವ ಬದಲು, ಕಾಲ ಕಾಲಕ್ಕೆ ಮಳೆ ಬೆಳೆ ಆದರೆ ಅದಕ್ಕಿಂತ ದೊಡ್ಡ ಲಾಭ ಇನ್ನೇನಿದೆ' ಎನ್ನುತ್ತಾರೆ ಸಮಿತಿಯ ಅಧ್ಯಕ್ಷರಾದ ನಾಗಪ್ಪ.

ಪಾಲಯ್ಯನಕೋಟೆಯಲ್ಲಿ ಎಲ್ಲರೂ ವನಪಾಲಕರೇ. ಕಾಡನ್ನು ಕಣ್ಣಲ್ಲಿ ಕಣ್ಣಿಟ್ಟು ಜೋಪಾನ ಮಾಡುತ್ತಾರೆ. ತಮ್ಮ ಸುಪರ್ದಿನಲ್ಲಿರುವ ಕಾಡು ಮಾತ್ರವಲ್ಲ; ಸುತ್ತಲಿನ ಅರಣ್ಯದಲ್ಲೂ ಇವರು ಸೌದೆ, ಮುಟ್ಟು, ಕೃಷಿ ಪರಿಕರ... ಇತ್ಯಾದಿಗಳನ್ನು ಹುಡುಕಿಕೊಂಡು ಹೋಗಲ್ಲ. ವರ್ಷದಿಂದ ವರ್ಷಕ್ಕೆ ಊರ ಜನರಲ್ಲಿ ಹಸಿರು ಬೆಳೆಸುವ ಸಂಸ್ಕೃತಿ ಗಾಢವಾಗುತ್ತಿದೆ

## ನಿಯಮ ಉಲ್ಲಂಘಿಸಿದರೆ ದಂಡ

ಕಾಡಿನ ಕಾವಲಿಗೆಂದು ಊರಿನ ಜನ ಓರ್ವ ಕಾವಲುಗಾರನನ್ನು ನೇಮಿಸಿದ್ದಾರೆ. ಜಾನುವಾರುಗಳು ಕಾಡಿನೊಳಗೆ ಹೋಗದಂತೆ ನಿರ್ಬಂಧಿಸಲಾಗಿದೆ. ಹಸಿ ಮರವಿರಲಿ, ಒಣ ಮರವನ್ನೂ ಸಹ ಯಾರೂ ಮುಟ್ಟುವಂತಿಲ್ಲ.

ಕಾಡಿಗೆ ಸಂಬಂಧಿಸಿದಂತೆ ಊರಿನ ನಿಯಮಗಳನ್ನು ಉಲ್ಲಂಘಿಸಿ ಮರಗಳನ್ನು ಕಡಿದವರಿಗೆ 10 ಸಾವಿರ ರೂಪಾಯಿ ದಂಡ ಹಾಗೂ ಅವರನ್ನು ಹಿಡಿದುಕೊಟ್ಟವರಿಗೆ 5 ಸಾವಿರ ರೂಪಾಯಿ ಬಹುಮಾನವನ್ನು ಸಮಿತಿ ಪ್ರಕಟಿಸಿದೆ. ಕಾಡು ಕಾಯುವ ಮಲಿಯಪ್ಪನವರಿಗೆ ಊರಿನ ಜನರೇ ಸಂಬಳ ಕೊಡುತ್ತಾರೆ. ಪ್ರತಿ ವರ್ಷ ಗ್ರಾಮ ದೇವತೆ ದುರುಗಮ್ಮಳ ಜಾತ್ರೆಗೆ ಮನೆಗೆ ಇಂತಿಷ್ಟು ಹಣ ವಂತಿಗೆ ಸಂಗ್ರಹಿಸಿ, ಅದರಲ್ಲಿ ಉಳಿದ ಹಣವನ್ನು ಸಂಬಳವಾಗಿ ನೀಡುತ್ತಾರೆ.

ಪಾಲಯ್ಯನ ಕೋಟೆ ಜನರು ಬೆಳೆಸಿದ ಪುಟ್ಟ ಕಾಡು ಜೀವವೈವಿಧ್ಯದ ಬೀಡೂ ಹೌದು. ಕಾಡಿನೊಳಗೆ ಜನರ ಸಂಚಾರ ಇಲ್ಲ. ಆ ಕಾರಣಕ್ಕೆ ಗೀಜಗ, ಬೂದಿ ಬೆಳವ, ಸಣ್ಣ ಜೇನು, ಹಿರೇ ಜೇನು, ನರಿ, ನವಿಲು – ಹೀಗೆ ಹತ್ತಾರು ಪ್ರಾಣಿಪಕ್ಷಿ ವೈವಿಧ್ಯ ಕಾಡಿನಲ್ಲಿ ಕಾಣಿಸುತ್ತದೆ.

## ಪಾಲಯ್ಯನ ಹಿನ್ನೆಲೆ

ಪಾಲಯ್ಯನ ಕೋಟೆ ಗ್ರಾಮದ ಮೊದಲ ಹೆಸರು ಪೂಜಾರಹಳ್ಳಿ. ರಾಜರ ಆಳ್ವಿಕೆಯ ಕಾಲದಲ್ಲಿ ಪಾಲಯ್ಯ ಎಂಬ ಪಾಳೇಗಾರ, ಇಲ್ಲಿನ ಕೆರೆಗೆ ಹೊಂದಿಕೊಂಡಿರುವ ಸಿದ್ದಯ್ಯನ ಗುಡ್ಡದಲ್ಲಿ ಕೋಟೆ ಕಟ್ಟಿಕೊಂಡು ರಾಜ್ಯಾಡಳಿತ ನಡೆಸುತ್ತಿದ್ದನಂತೆ. ಅವನ ಕಾರಣಕ್ಕೆ ಊರಿಗೆ ಪಾಲಯ್ಯನ ಕೋಟೆ ಎಂದು ಹೆಸರು ಬಂದಿದೆ. ಶಿಥಿಲಗೊಂಡ ಕೋಟೆ ಈಗಲೂ ಇದೆ.